# ಬಯೋಕಾನ್ ಲಿಮಿಟೆಡ್ ನೀತಿ ದಾಖಲೆ

## ಎಚ್ಚರಿಕೆ ಕಹಳೆ ಮತ್ತು ಸಮಗ್ರ ನೀತಿ

| | | | |
|---|---|---|---|
| **ಶೀರ್ಷಿಕೆ** | **ಬಯೋಕಾನ್‌ಗೆ ಅನ್ವಯಿಸುವ – ಎಚ್ಚರಿಕೆ ಕಹಳೆ ಮತ್ತು ಸಮಗ್ರ ನೀತಿ** | | |
| **ವ್ಯಾಪ್ತಿ** | ಬಯೋಕಾನ್ ಸಂಸ್ಥೆಗಳ ಸಮೂಹವನ್ನು ಒಳಗೊಂಡಿರುತ್ತದೆ (ಇನ್ನು ಮುಂದೆ "ಸಂಸ್ಥೆ" ಎಂಬುದಾಗಿ ಉಲ್ಲೇಖಿಸಲಾಗುವುದು), ಅದರ ಅಂಗ ಸಂಸ್ಥೆಗಳು (ಬಯೊಕಾನ್ ಬಯೋಲಾಜಿಕ್ಸ್ ಮತ್ತು ಸಿಂಜೀನ್ ಮತ್ತು ಅವುಗಳ ಅಂಗ ಸಂಸ್ಥೆಗಳು ಸೇರಿದಂತೆ ಹೊರತುಪಡಿಸಿ) ಮತ್ತು ಈ ಕೆಳಗಿನವುಗಳಿಗೆ ಅನ್ವಯಿಸುತ್ತದೆ.<br>ಎ) ಬಯೋಕಾನ್ ಸಮೂಹದ ಉದ್ಯೋಗಿಗಳು : ಈ ನೀತಿಯು ಬಯೋಕಾನ್ ಸಮೂಹದ (ಇಂಟರ್ನ್‌ಗಳು, ತರಬೇತಿದಾರರು, ಗುತ್ತಿಗೆ ಕಾರ್ಮಿಕರನ್ನು ಒಳಗೊಂಡಂತೆ) ಎಲ್ಲಾ ಉದ್ಯೋಗಿಗಳಿಗೆ ಅನ್ವಯಿಸುತ್ತದೆ.<br>ಬಿ) ಅಂಗ ಸಂಸ್ಥೆಗಳು ಮತ್ತು ಇತರ ನಿಯಂತ್ರಿತ ಸಂಯೋಜನೆಗಳು : ಅಂಗ ಸಂಸ್ಥೆಗಳು (ಬಯೋಕಾನ್ ಬಯೋಲೋಜಿಕ್ಸ್ ಮತ್ತು ಸಿಂಜಿನ್ ಹೊರತುಪಡಿಸಿ) ಮತ್ತು ಸಂಸ್ಥೆಯ ಇತರ ನಿಯಂತ್ರಿತ ಸಂಯೋಜನೆಗಳು ಅನುಗುಣವಾದ ನೀತಿಗಳನ್ನು ಅಳವಡಿಸಿಕೊಳ್ಳಬೇಕು ಮತ್ತು ಅನುಸರಿಸಬೇಕು. ನಿಯಂತ್ರಿತ ಸಂಯೋಜನೆಯು ಅಂಗ ಸಂಸ್ಥೆ ಅಥವಾ ಇತರ ಘಟಕವಾಗಿದ್ದು, ಇದರಲ್ಲಿ ಸಂಸ್ಥೆಯು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ 50 (ಐವತ್ತು) ಪ್ರತಿಶತಕ್ಕೆ ಸಮನಾದ ಅಥವಾ ಹೆಚ್ಚಿನ ಮತದಾನದ ಹಕ್ಕುಗಳು ಅಥವಾ ಇದರಲ್ಲಿ ಘಟಕದ ಅಥವಾ ಸಂಸ್ಥೆಯ ಪರವಾಗಿ ನಿಯಂತ್ರಿಸುವ ಅಧಿಕಾರವನ್ನು ಹೊಂದಿರುತ್ತದೆ.<br>ಸಿ) ಸಂಸ್ಥೆಯ ನಿರ್ದೇಶಕರು. | | |
| **ಉದ್ದೇಶ ಮತ್ತು ಪೀಠಿಕೆ** | ಎಚ್ಚರಿಕೆ ಕಹಳೆ ಮತ್ತು ಸಮಗ್ರತೆಯ ನೀತಿಯ ಉದ್ದೇಶ ವೆಂದರೆ (ಇನ್ನು ಮುಂದೆ "ನೀತಿ" ಎಂಬುದಾಗಿ ಉಲ್ಲೇಖಿಸಲಾಗುವುದು) :<br>ಎ) ಅನೈತಿಕ ಅಭ್ಯಾಸವನ್ನು (ಕಾನೂನಿನ ಉಲ್ಲಂಘನೆಯಾಗಿರಲಿ ಅಥವಾ ಇಲ್ಲದಿರಲಿ)ಗಮನಿಸುವ ವ್ಯಕ್ತಿಯನ್ನು ಸಮಗ್ರತೆ ಸಮಿತಿ (ಇಲ್ಲಿ ವಿವರಿಸಿದಂತೆ) ಅಥವಾ ಆಡಿಟ್ ಸಮಿತಿಯನ್ನು ಸಂಪರ್ಕಿಸಲು ಸಕ್ರಿಯಗೊಳಿಸುವುದು.<br>ಬಿ) ಶಂಕಿತ ಅನೈತಿಕ ಚಟುವಟಿಕೆಗಳ ಆಪಾದನೆಗಳನ್ನು ವ್ಯವಹರಿಸುವುದು, ವರದಿ ಮಾಡುವುದು ಮತ್ತು ತನಿಖೆ ನಡೆಸುವುದು.<br>ಸಿ) ನಿಜವಾದ ಕಾಳಜಿ ಅಥವಾ ಕುಂದುಕೊರತೆಗಳನ್ನು ವರದಿ ಮಾಡಲು ನಿರ್ದೇಶಕರು ಮತ್ತು ಉದ್ಯೋಗಿಗಳನ್ನು ಸಕ್ರಿಯಗೊಳಿಸುವುದು.<br>ಶಂಕಿತ ಅನೈತಿಕ/ಅನುವರ್ತನೆಯಿಲ್ಲದ ಚಟುವಟಿಕೆಗಳ ಎಲ್ಲಾ ಆಪಾದನೆಗಳನ್ನು ವರದಿ ಮಾಡಲು ಈ ನೀತಿಯಲ್ಲಿ ಒದಗಿಸಲಾದ ಮಾರ್ಗದರ್ಶನವನ್ನು ಬಳಸಲು ಸಂಸ್ಥೆಯ ಉದ್ಯೋಗಿಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಎಲ್ಲಾ ನಿದರ್ಶನಗಳಲ್ಲಿ, ಈ ನೀತಿ ಮತ್ತು ಅನ್ವಯವಾಗುವ ಕಾನೂನುಗಳು ಮತ್ತು ನಿಬಂಧನೆಗಳು ಮತ್ತು ಸೂಕ್ತವಾದ ತನಿಖಾ ಪ್ರಕ್ರಿಯೆಗೆ ಅನುಗುಣವಾಗಿ ಸಂದರ್ಭಗಳು ಖಚಿತಪಡಿಸಿದಾಗ ಸೂಕ್ತವಾದ ತನಿಖಾ ಪ್ರಕ್ರಿಯೆಯನ್ನು ನಿರ್ಧರಿಸುವ ವಿಶೇಷತೆಯನ್ನು ಸಂಸ್ಥೆಯು ಉಳಿಸಿಕೊಂಡಿರುತ್ತದೆ. | | |
| **ನೀತಿ ಆವೃತ್ತಿ ಸಂಖ್ಯೆ** | 1.4 | **ನೀತಿ ಜಾರಿ ದಿನಾಂಕ** | 18ನೇ ಜನವರಿ 2006 |
| **ಮುಂದಿನ ಪರಿಷ್ಕರಣೆ ದಿನಾಂಕ** | 23ನೇ ಮೇ 2025 | **ನೀತಿ ಅನುಸರಣಾ ದಿನಾಂಕ** | 23ನೇ ಮೇ 2020 |
| **ನೀತಿ ಪರಿಷ್ಕರಣೆ ಮತ್ತು ಅನುಮೋದನಾ ಪ್ರಾಧಿಕಾರ** | ಸಿಇಒ ಮತ್ತು ಹೆಡ್ ಎಚ್ ಆರ್, ಬಯೋಕಾನ್‌ನ ಆಡಿಟ್ ಕಮಿಟಿ<br>2 ವರ್ಷಗಳಿಗೊಮ್ಮೆ ಕೈಗೊಳ್ಳಬೇಕಾದ ನೀತಿಯ ಪರಿಶೀಲನೆ ನಡೆಸುತ್ತಾರೆ. | | |

**ನೀತಿಯ ವಿವರಗಳು**

1. **ವ್ಯಾಖ್ಯಾನಗಳು :**

- **"ತನಿಖಾ ಸಮಿತಿ"** ಈ ನೀತಿಯ ಪ್ಯಾರಾ (3.1) ರಲ್ಲಿರುವಂತೆ ಅರ್ಥವನ್ನು ನೀಡುತ್ತದೆ.

- **"ಭಾಗವಹಿಸುವವರು"** ಈ ನೀತಿಯ ಪ್ಯಾರಾ (4.2) ರಲ್ಲಿರುವಂತೆ ಅರ್ಥವನ್ನು ಹೊಂದಿರುತ್ತದೆ.
- **"ವಿಷಯ"** ಎಂದರೆ, ಎಚ್ಚರಿಕೆ ಕಹಳೆ ಮಾಡಿದ ಆಪಾದನೆ ಅಥವಾ ತನಿಖೆಯ ಸಮಯದಲ್ಲಿ ಸಂಗ್ರಹಿಸಿದ ಪುರಾವೆಗಳ ಮೂಲಕ ತನಿಖಾ ಸತ್ಯ ಶೋಧನೆಯ ಕೇಂದ್ರಬಿಂದುವಾಗಿರುವ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು, ಮತ್ತು ತನಿಖೆಯ ಸಮಯದಲ್ಲಿ ಸಂಗ್ರಹಿಸಲಾದ ಪುರಾವೆಗಳು.
- **"ಅನೈತಿಕ/ಅನುವರ್ತನೆಯಿಲ್ಲದ ಚಟುವಟಿಕೆಗಳು"** ಎಂದರೆ ಅನೈತಿಕ ಸ್ವರೂಪದ ಚಟುವಟಿಕೆಗಳು ಅಥವಾ ಸಂಸ್ಥೆಯ ನೀತಿ ಸಂಹಿತೆಯೊಂದಿಗೆ ಸಂಘರ್ಷವುಂಟುಮಾಡುವ ಚಟುವಟಿಕೆಗಳನ್ನು ಅರ್ಥೈಸುತ್ತದೆ.
- **"ಸಮಗ್ರತೆ ಸಮಿತಿ"** ಎಂದರೆ ಈ ನೀತಿಯ ಪ್ಯಾರ (3) ರಲ್ಲಿ ಸೂಚಿಸಲಾದ ಅರ್ಥವನ್ನು ಹೊಂದಿರುತ್ತದೆ.
- **"ಆಡಿಟ್ ಸಮಿತಿ"** ಎಂದರೆ ಈ ನೀತಿಯ ಪ್ಯಾರ (3.2) ರಲ್ಲಿನ ಅರ್ಥವನ್ನು ಹೊಂದಿರುತ್ತದೆ.

ಈ ನೀತಿಯಲ್ಲಿ ಸ್ಪಷ್ಟವಾಗಿ ವ್ಯಾಖ್ಯಾನಿಸದಿರುವ ವ್ಯಾಖ್ಯಾನಗಳು, ನೀತಿ ಸಂಹಿತೆ ಅಥವಾ ಕಾಲಕಾಲಕ್ಕೆ ತಿದ್ದುಪಡಿ ಮಾಡುವ ಸಂಸ್ಥೆಗಳ ಕಾಯ್ದೆ, 2013 ಮತ್ತು ಅದರಲ್ಲಿ ಮಾಡಲಾದ ನಿಯಮಗಳು, ಸೆಬಿ ಕಾಯ್ದೆ ಮತ್ತು ಸೆಬಿ ಪಟ್ಟಿ ಮಾಡುವ ನಿಯಮಗಳ ಅರ್ಥವನ್ನು ಹೊಂದಿರುತ್ತವೆ.

## 2. ವ್ಯಾಪ್ತಿ

ದುಷ್ಕೃತ್ಯಗಳು, ಅನುಸರಣೆಯ ಉಲ್ಲಂಘನೆಗಳು ಮತ್ತು ಕೆಳಕಂಡವುಗಳನ್ನು ಒಳಗೊಂಡಂತೆ ನಡೆದ/ಶಂಕಿತ ಘಟನೆಗಳು (ಆದರೆ ಇವುಗಳಿಗೆ ಸೀಮಿತವಾಗಿರದೆ) ಈ ನೀತಿಯ ವ್ಯಾಪ್ತಿಗೆ ಬರುತ್ತವೆ :

- ಅಧಿಕಾರದ ದುರುಪಯೋಗ
- ಸಾರ್ವಜನಿಕ ಆರೋಗ್ಯ ಮತ್ತು ಸುರಕ್ಷತೆಗೆ ಗಣನೀಯ ಮತ್ತು ನಿರ್ದಿಷ್ಟ ಅಪಾಯವನ್ನುಂಟುಮಾಡುವ ಉದ್ದೇಶಪೂರ್ವಕ ನಿರ್ಲಕ್ಷತೆ.
- ಸಂಸ್ಥೆಯ ಡೇಟಾ/ದಾಖಲೆಗಳ ಬದಲಾಯಿಸುವ ಕೈಚಳಕ
- ವಂಚನೆ ಅಥವಾ ಶಂಕಿತ ವಂಚನೆ ಸೇರಿದಂತೆ ಹಣಕಾಸಿನ ಅಕ್ರಮಗಳು.
- ಅಪ್ರಕಟಿತ ಬೆಲೆಯ ಸೂಕ್ಷ್ಮ ಮಾಹಿತಿಯ ಸೋರಿಕೆ/ಆಂತರಿಕ ವ್ಯಾಪಾರ, (ಕ್ರಿಮಿನಲ್ ಅಪರಾಧಗಳು.)
- ಗೌಪ್ಯ/ಸ್ವಾಮ್ಯದ ಮಾಹಿತಿಯ ಕಳ್ಳತನ
- ಕಾನೂನು/ನಿಬಂಧನೆಗಳ ಉದ್ದೇಶಪೂರ್ವಕ ಉಲ್ಲಂಘನೆ.
- ಸಂಸ್ಥೆಯ ನಿಧಿ/ಆಸ್ತಿಗಳ ದುರ್ಬಳಕೆ/ದುರುಪಯೋಗ.
- ಉದ್ಯೋಗಿಗಳ ನೀತಿ ಸಂಹಿತೆ ಅಥವಾ ನಿಯಮಗಳ ಉಲ್ಲಂಘನೆ.
- ಯಾವುದೇ ಇತರ ಅನೈತಿಕ, ಪಕ್ಷಪಾತ, ಒಲವು, ವಿವೇಚನಾರಹಿತ ಚಟುವಟಿಕೆಗಳು ಮೇಲಿನವುಗಳಿಗೆ ಕಾರಣವಾಗುತ್ತವೆ.

ಸೂಚನೆ : ಉದ್ಯೋಗಿಗಳ/ಉದ್ಯೋಗದಾತರ/ಸಹೋದ್ಯೋಗಿಗಳ/ನಿರ್ದೇಶಕರ ವಿರುದ್ಧ ದುರುದ್ದೇಶಪೂರಿತ ಅಥವಾ ಆಧಾರರಹಿತ ಆರೋಪಗಳನ್ನು ಎತ್ತುವುದಕ್ಕಾಗಿ ಈ ನೀತಿಯ ದುರ್ಬಳಕೆ ಮಾಡಬಾರದು.

## 3. ಸಮಗ್ರ ಸಮಿತಿ ರಚನೆ :

ಸಮಗ್ರತೆ ನೀತಿಯು ಸಿಇಒ, ಸಿಎಫ್ಒ ಮತ್ತು ಎಚ್ ಆರ್ ಹೆಡ್‌ರುಗಳನ್ನು ಒಳಗೊಂಡಿರುತ್ತದೆ, ಅವರು ಸಂಸ್ಥೆಯ ಒಳಗಿನ ಅಥವಾ ಹೊರಗಿನ ಸಂಬಂಧಿತ ಮಧ್ಯಸ್ಥಗಾರರಿಗೆ ತನಿಖೆಯನ್ನು ನಿಯೋಜಿಸಬಹುದು. ಸಮಗ್ರತಾ ಸಮಿತಿಯು ಎಚ್ಚರಿಕೆ ಕಹಳೆಯಿಂದ ಎತ್ತಿರುವ ಕಳಕಳಿಯನ್ನು ಸ್ವತಂತ್ರವಾಗಿ ನಿರ್ಣಯಿಸುತ್ತದೆ. ಸಮಗ್ರತಾ ಸಮಿತಿಯು ತನ್ನ ಸದಸ್ಯರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ನೇಮಿಸುತ್ತದೆ, ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸುತ್ತಾರೆ.

### 3.1 ತನಿಖಾ ಸಮಿತಿಯ ರಚನೆ :

ಸಮಗ್ರತಾ ಸಮಿತಿಯು ಒಂದು ಸಮಿತಿಯನ್ನು ("ತನಿಖಾ ಸಮಿತಿ") ರಚಿಸುತ್ತದೆ, ಅದರಲ್ಲಿ, ಎಚ್ಚರಿಕೆ ಕಹಳೆ ಎತ್ತಿರುವ ಅನೈತಿಕ/ಅನುವರ್ತನೆಯಿಲ್ಲದ ಚಟುವಟಿಕೆಗಳ ವಾಸ್ತವಿಕ ತನಿಖೆಯನ್ನು ನಡೆಸಲು ಸಮಗ್ರತಾ ಸಮಿತಿ ನಾಮನಿರ್ದೇಶನ ಮಾಡಿರುವ ಸದಸ್ಯರನ್ನು ಒಳಗೊಂಡಿರುತ್ತದೆ. ತನಿಖಾ ಸಮಿತಿಯ ಸಂಖ್ಯೆಯನ್ನು ಸಮಗ್ರತಾ ಸಮಿತಿ ನಿರ್ಧರಿಸುತ್ತದೆ. ವಿಷಯದ ಬಗ್ಗೆ ತನಿಖೆಯನ್ನು ನಡೆಸಲು ಕನಿಷ್ಠ 2 ಸದಸ್ಯರುಗಳ ಅಗತ್ಯವಿರುತ್ತದೆ. ತನಿಖಾ ಸಮಿತಿಯ ಸದಸ್ಯರುಗಳು ಅಂತಹ ತನಿಖೆಗೆ ಮೂರನೇ ಪಕ್ಷವನ್ನು ನೇಮಕ ಮಾಡಿಕೊಳ್ಳಬಹುದೆಂಬುದನ್ನು ಅಥವಾ ಅದನ್ನು ಆಂತರಿಕವಾಗಿ ತನಿಖಾ ಸಮಿತಿಯೇ ಮಾಡಬಹುದು ಎಂಬುದನ್ನು ಇಲ್ಲಿ ಸ್ಪಷ್ಟಪಡಿಸಲಾಗಿದೆ.

### 3.2 ಆಡಿಟ್ ಸಮಿತಿಯ ರಚನೆ :

ಉಲ್ಲೇಖಿಸಲಾದ ಆಡಿಟ್ ಸಮಿತಿಯು, ಸಂಸ್ಥೆಗಳ ಕಾಯ್ದೆಯ ಉಪಬಂಧಗಳಿಗೆ ಅನುಗುಣವಾಗಿ ಸಮೂಹದ ಸಂಬಂಧಪಟ್ಟ ಸಂಸ್ಥೆಗಳ ನಿರ್ದೇಶಕರ ಮಂಡಳಿಯಿಂದ ರಚಿಸಲ್ಪಟ್ಟಿರುತ್ತದೆ.

### 3.3 ಸಮಗ್ರತಾ ಸಮಿತಿಯಿಂದ ತನಿಖಾ ಪ್ರಕ್ರಿಯೆ :

» ಸಮಗ್ರತಾ ಸಮಿತಿಯು, ಕಳಕಳಿ ಅಥವಾ ದೂರು ವಾಸ್ತವವಾಗಿ ಒಂದು ಅನೈತಿಕ/ಅನುವರ್ತನೆಯಿಲ್ಲದ ಚಟುವಟಿಕೆಗೆ ಸಂಬಂಧಿಸಿದೆಯೇ ಎಂಬುದನ್ನು ನಿರ್ಧಾರ ಮಾಡುತ್ತದೆ.

» ಸಮಗ್ರತಾ ಸಮಿತಿಯ ಆರಂಭಿಕ ವಿಚಾರಣೆಯ ಪ್ರಕಾರ ಚಟುವಟಿಕೆಯು ಅನೈತಿಕ/ ಅನುವರ್ತನೆಯಿಲ್ಲದ ದೂರಿಗೆ ಯಾವುದೇ ಆಧಾರವಿಲ್ಲ ಅಥವಾ ಈ ನೀತಿಯ ಅಡಿಯಲ್ಲಿ ಅನುಸರಿಸಬೇಕಾದ ವಿಷಯವಲ್ಲ ಎಂಬುದಾಗಿ ಸೂಚಿಸಿದಲ್ಲಿ ಅದನ್ನು ಈ ಹಂತದಲ್ಲಿ ವಜಾಗೊಳಿಸಬಹುದು ಮತ್ತು ನಿರ್ಧಾರವನ್ನು ದಾಖಲಿಸಲಾಗುತ್ತದೆ. ಸ್ವೀಕರಿಸಲಾದ ದೂರು ಸಮಗ್ರತಾ ಸಮಿತಿಯ ವ್ಯಾಪ್ತಿಗೆ ಒಳಪಡದಿದ್ದಲ್ಲಿ, ಆಗ ಅದನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಸಂಬಂಧಿತ ಸಮಿತಿಗೆ ಕಳುಹಿಸಲಾಗುತ್ತದೆ.

» ಆರಂಭಿಕ ವಿಚಾರಣೆಯಲ್ಲಿ ಮುಂದಿನ ತನಿಖೆ ಅಗತ್ಯವೆಂಬುದಾಗಿ ಪ್ರಚಿಸಿದಲ್ಲಿ ಸಮಗ್ರತಾ ಸಮಿತಿಯಿಂದ ನಾಮನಿರ್ದೇಶನಗೊಂಡ ತನಿಖಾ ಸಮಿತಿಯ ಮೂಲಕ ಇದನ್ನು ಕೈಗೊಳ್ಳಲಾಗುತ್ತದೆ. ತಟಸ್ಥ ಸತ್ಯಶೋಧನೆಯ ಪ್ರಕ್ರಿಯೆಯಾಗಿ ಮತ್ತು ತಪ್ಪಿತಸ್ಥರು ಎಂಬುದಾಗಿ ಭಾವಿಸದೆ ನ್ಯಾಯಯುತ ರೀತಿಯಲ್ಲಿ ತನಿಖೆಯನ್ನು ನಡೆಸಲಾಗುವುದು.

» ಎಚ್ಚರಿಕೆ ಕಹಳೆ ದೂರುಗಳು ಸಮಗ್ರತಾ ಸಮಿತಿ ಸದಸ್ಯರ ವಿರುದ್ಧವಾಗಿದ್ದ ಸಂದರ್ಭದಲ್ಲಿ, ತನಿಖೆಯ ಅವಧಿಯವರೆಗೆ ಅಂತಹ ಸದಸ್ಯ ಮತ್ತು ಆತನ/ಆಕೆಯ ಸಂಬಂಧಿಕರನ್ನು ಸಮಗ್ರತಾ ಸಮಿತಿಯಿಂದ ಹೊರಗಿಡಲಾಗುತ್ತದೆ ಮತ್ತು ಸಮಗ್ರತಾ ಸಮಿತಿಯಿಂದ ತೀರ್ಪು ಬರುವವರೆಗೆ ಅಂತಹ ಸದಸ್ಯರನ್ನು ಈ ನೀತಿಯಡಿಯಲ್ಲಿ ತಿಳಿಸಿರುವ ವಿಷಯಕ್ಕೊಳಪಟ್ಟ ಅಧಿಕಾರದಂತೆ ಪರಿಗಣಿಸಲಾಗುವುದು.

» ವಿಷಯದ ಗಂಭೀರತೆಯನ್ನು ಅವಲಂಭಿಸಿ, ಸಮಗ್ರತಾ ಸಮಿತಿಯು ಪ್ರಸ್ತಾವಿಕ ಶಿಸ್ತು ಕ್ರಮ/ಪ್ರತಿ ಕ್ರಮದೊಂದಿಗೆ ವಿಷಯವನ್ನು ಆಡಿಟ್ ಸಮಿತಿಗೆ ಉಲ್ಲೇಖಿಸಬಹುದು. ಆಡಿಟ್ ಸಮಿತಿಯು ವಿಷಯವನ್ನು ತನಗೆ ಸೂಕ್ತವೆಂಬುದಾಗಿ ತೋರಿದಂತೆ ನಿರ್ಧರಿಸಬಹುದು. ಅಂತಹ ಸಂದರ್ಭಗಳಲ್ಲಿ, ಸಮಗ್ರತಾ ಸಮಿತಿಯು, ಆಡಿಟ್ ಸಮಿತಿಯ ಅಧ್ಯಕ್ಷರೊಂದಿಗೆ ಎಚ್ಚರಿಕೆ ಕಹಳೆ ದೂರುದಾರರ ನೇರ ಸಂಪರ್ಕವನ್ನು ಖಚಿತಪಡಿಸುತ್ತದೆ.

» ಸಮಗ್ರತಾ ಸಮಿತಿಯ ಅತೃಪ್ತಿಕರ ಪರಿಹಾರದ ಸಂದರ್ಭದಲ್ಲಿ, ಉದ್ಯೋಗಿ ಆಡಿಟ್ ಸಮಿತಿ ಅಧ್ಯಕ್ಷರನ್ನು ಸಂಪರ್ಕಿಸಬಹುದು.

» ಆಡಿಟ್ ಸಮಿತಿ ಅಧ್ಯಕ್ಷರ ಇ-ಮೇಲ್ ಐಡಿ ***chairperson.auditcommittee@biocon.com***

### 3.4 ಸಮಗ್ರತಾ ಸಮಿತಿಯ ಹೊಣೆಗಾರಿಕೆ :

» ಸಮಗ್ರತಾ ಸಮಿತಿಯು, ತನಿಖಾ ಸಮಿತಿಯ ಫಲಿತಾಂಶವನ್ನು ಪರಿಶೀಲಿಸುತ್ತದೆ ಮತ್ತು ಸೂಕ್ತ ಸರಿಪಡಿಕೆ ಕ್ರಮವನ್ನು ಆರಂಭಿಸುತ್ತದೆ.

» ತನಿಖೆಯ ಪ್ರಕ್ರಿಯೆಯು ನ್ಯಾಯಯುತ ಮತ್ತು ಪಾರದರ್ಶಕವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಸಮಗ್ರತಾ ಸಮಿತಿಯ ಜವಾಬ್ದಾರಿಯಾಗಿರುತ್ತದೆ.

» ಸಮಗ್ರತಾ ಸಮಿತಿಯು ತನ್ನ ನಿಲುವು ಮತ್ತು ಪ್ರಕರಣವನ್ನು ಸಾಬೀತುಪಡಿಸಲು/ಸಮ್ಮತಿಸಲು ವಿಷಯದ ಬಗ್ಗೆ ಸಾಕಷ್ಟು ಮತ್ತು ಅಗತ್ಯವಿರುವ ವೈಯಕ್ತಿಕ ವಿಚಾರಣೆ ಸೇರಿದಂತೆ ನ್ಯಾಯೋಚಿತ ಅವಕಾಶವನ್ನು ಒದಗಿಸುತ್ತದೆ ಮತ್ತು ತನಿಖೆಯ ಪ್ರಕ್ರಿಯೆಯಲ್ಲಿ ಸಂಪೂರ್ಣ ನ್ಯಾಯಸಮ್ಮತತೆಯನ್ನು ಖಚಿತಪಡಿಸುತ್ತದೆ.

» ಸಮಗ್ರತಾ ಸಮಿತಿ ದೂರು ಸ್ವೀಕರಿಸಿದ ದಿನಾಂಕದಿಂದ 15 ದಿನಗಳ ನಿಗದಿತ ಅವಧಿಯೊಳಗೆ ದೂರನ್ನು ಪರಿಹರಿಸಲು */ತಿರಸ್ಕರಿಸಲು ಸಾಧ್ಯವಾಗದಿದ್ದರೆ, ಅದು ವಿಷಯವನ್ನು ಆಡಿಟ್ ಸಮಿತಿಗೆ ಉಲ್ಲೇಖಿಸುತ್ತದೆ.

» ಅಂತಹ ಸಂದರ್ಭಗಳಲ್ಲಿ, ಸಮಗ್ರತಾ ಸಮಿತಿಯು ಎಚ್ಚರಿಕೆ ಕಹಳೆ ದೂರುದಾರರಿಗೆ ಆಡಿಟ್ ಸಮಿತಿಯ ಅಧ್ಯಕ್ಷರೊಂದಿಗೆ ನೇರ ಸಂಪರ್ಕವನ್ನು ಖಚಿತಪಡಿಸುತ್ತದೆ.

* ತನಿಖೆಯನ್ನು ಪ್ರಾರಂಭಿಸುತ್ತಿದೆ ಎಂಬುದನ್ನು ಸೂಚಿಸುತ್ತದೆ.

## 4. ಅನೈತಿಕ/ ಅನುವರ್ತನೆಯಿಲ್ಲದ ಚಟುವಟಿಕೆಗಳ ಆಪಾದನೆಗಳನ್ನು ವರದಿ ಮಾಡುವುದು :

- ಎಚ್ಚರಿಕೆ ಕಹಳೆ ಶಂಕಿತ ಅನೈತಿಕ/ ಅನುವರ್ತನೆಯಿಲ್ಲದ ಚಟುವಟಿಕೆಗಳ ಆರೋಪವನ್ನು ವರದಿ ಮಾಡಬಹುದು. ಅನೈತಿಕ/ ಅನುವರ್ತನೆಯಿಲ್ಲದ ಚಟುವಟಿಕೆಗಳ ತಿಳುವಳಿಕೆ ಅಥವಾ ಅನುಮಾನವು ಉದ್ಯೋಗಿಗಳು, ಗುತ್ತಿಗೆದಾರರು, ಗ್ರಾಹಕರು, ಮಾರಾಟಗಾರರು, ಆಂತರಿಕ ಅಥವಾ ಬಾಹ್ಯ ಆಡಿಟರುಗಳು, ಕಾನೂನು ಜಾರಿ/ನಿಯಂತ್ರಕ ಏಜನ್ಸಿಗಳು, ನಿರ್ದೇಶಕರು ಅಥವಾ ಮೂರನೇ ವ್ಯಕ್ತಿಗಳಿಂದ ಹುಟ್ಟಿಕೊಳ್ಳಬಹುದು.
- ಎಚ್ಚರಿಕೆ ಕಹಳೆಯ ದೂರುದಾರರು ನೀಡುವ ಮಾಹಿತಿಯು ನೈಜವಾಗಿರಬೇಕು ಮತ್ತು ಸಾಧ್ಯವಿರುವ ಕಡೆಗಳಲ್ಲಿ ಸಾಕಷ್ಟು ಪೂರಕ ಅಂಕಿಅಂಶಗಳು/ಸಾಕ್ಷಿಯನ್ನು ನೀಡಬೇಕು.
- ಎಚ್ಚರಿಕೆ ಕಹಳೆ ದೂರುದಾರರು ಮೊದಲು ಅನೈತಿಕ/ಅನನುಸರಣಾ ಅಥವಾ ಶಂಕಿತ ಚಟುವಟಿಕೆಯ ಬಗ್ಗೆ ತಿಳುವಳಿಕೆಯನ್ನು ಕೆಳಕಂಡ ಯಾವುದಾದರು ಒಂದರ ಮೂಲಕ ಅದನ್ನು ತಿಳಿದ 3 ದಿನಗಳೊಳಗೆ ಅನೈತಿಕ/ಅನನುಸರಣಾ ಚಟುವಟಿಕೆಯನ್ನು ವರದಿ ಮಾಡಬೇಕು.

  » ಲಿಖಿತ ದೂರು : ಲಿಖಿತ, ಸಹಿ ಮಾಡಿದ ದೂರನ್ನು ವೈಯಕ್ತಿಕವಾಗಿ ಹಸ್ತಾಂತರಿಸಬಹುದು ಅಥವಾ ಸಮಗ್ರತಾ ಸಮಿತಿಯ ಯಾವುದೇ ಸದಸ್ಯರಿಗೆ ಪೋಸ್ಟ್ ಮಾಡಬಹುದು.

  » ಇ-ಮೇಲ್ ದೂರು : ಈ ಕೆಳಗೆ ನಮೂದಿಸಲಾದ ಇ-ಮೇಲ್ ವಿಳಾಸದಲ್ಲಿ ಸಮಗ್ರತಾ ಸಮಿತಿಯ ಯಾವುದೇ ಸದಸ್ಯರಿಗೆ ದೂರನ್ನು ಕಳುಹಿಸಬಹುದು :

  - ಬಯೋಕಾನ್ ಲಿಮಿಟೆಡ್ ಮತ್ತು ಅಂಗ ಸಂಸ್ಥೆಗಳು : ***integrity@biocon.com***

- ಸಮಗ್ರತಾ ಸಮಿತಿ ಸದಸ್ಯರಲ್ಲದೆ ಇತರ ಸದಸ್ಯರಿಗೆ ವರದಿ ಮಾಡುವುದು : ಲಿಖಿತ ವರದಿಯನ್ನು ಎಚ್ಚರಿಕೆ ಕಹಳೆ ದೂರುದಾರರ ತಕ್ಷಣದ ಮೇಲ್ವಿಚಾರಕರಿಗೆ (ಯಾವುದೇ ವೈಯಕ್ತಿಕ ಹಿತಾಸಕ್ತಿ ಸಂಘರ್ಷವಿಲ್ಲದಿದ್ದಲ್ಲಿ) ಅಥವಾ ಎಚ್ಚರಿಕೆ ಕಹಳೆ ದೂರುದಾರರು ನಿರೀಕ್ಷಿಸಬಹುದಾದ ಆಪಾದಿತ ಅನೈತಿಕ/ಅನನುಸರಣೆ ಚಟುವಟಿಕೆಯನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಹೊಂದಿರುವ ಯಾವುದೇ ಇತರ ಅಧಿಕಾರಿಗೆ ಹಸ್ತಾಂತರಿಸಬಹುದು. ಅಂತಹ ಸಂದರ್ಭದಲ್ಲಿ, ಎಚ್ಚರಿಕೆ ಕಹಳೆದಾರರು ಸಂಪರ್ಕಿಸಲಾದ ಅಧಿಕಾರಿ ದೂರಿನ ಸ್ಕ್ಯಾನ್ ಮಾಡಿದ ಪ್ರತಿಯನ್ನು ಮೂಲ ದೂರನ್ನು ಸ್ವೀಕರಿಸಿದ 3 ದಿನಗಳೊಳಗೆ ಸಮಗ್ರತಾ ಸಮಿತಿಗೆ ಕಳುಹಿಸಬೇಕು. ಇ-ಮೇಲ್‌ಅನ್ನು ಕೆಳಕಂಡ ವಿಳಾಸಕ್ಕೆ ಕಳುಹಿಸಬಹುದು :

  - ಬಯೋಕಾನ್ ಲಿಮಿಟೆಡ್ ಮತ್ತು ಅಂಗ ಸಂಸ್ಥೆಗಳು : ***integrity@biocon.com***

- ಎಚ್ಚರಿಕೆ ಕಹಳೆದಾರರಿಂದ ಯಾವುದೇ ಉದ್ಯೋಗಿ/ಸಿಬ್ಬಂದಿ ಮೌಖಿಕ ದೂರನ್ನು ಸ್ವೀಕರಿಸಿದಲ್ಲಿ, ದೂರಿನ ವಿವರಗಳನ್ನು ಸ್ವೀಕರಿಸಿದ 3 ಕೆಲಸದ ದಿನಗಳೊಳಗೆ ಸಮಗ್ರತಾ ಸಮಿತಿಗೆ ಕಳುಹಿಸಬೇಕು. ಅಂತಹ ದೂರುಗಳನ್ನು ಸಮಗ್ರತಾ ಸಮಿತಿಗೆ ವರದಿ ಮಾಡುವ ಜವಾಬ್ದಾರಿ ಮೌಖಿಕವಾಗಿ ದೂರನ್ನು ಸ್ವೀಕರಿಸಿದ ಉದ್ಯೋಗಿ/ಸಿಬ್ಬಂದಿಯದ್ದಾಗಿರುತ್ತದೆ. ಸಮಗ್ರತಾ ಸಮಿತಿಯು ಮಾಹಿತಿಯನ್ನು ಸ್ವೀಕರಿಸಿದಾಗ, ಈ ದಾಖಲೆಯ ಕಲಂ 3.3ರಲ್ಲಿ ವಿವರಿಸಿರುವಂತೆ ಮುಂದಿನ ಪ್ರಕ್ರಿಯೆಯನ್ನು ಅನುಸರಿಸುತ್ತದೆ.
- ದೂರು ಸಮಗ್ರತಾ ಸಮಿತಿಯ ಯಾವುದೇ ಸದಸ್ಯರನ್ನೊಳಗೊಂಡಿದ್ದಲ್ಲಿ ಅದನ್ನು ಅಧ್ಯಕ್ಷರಿಗೆ ಕಳುಹಿಸಬಹುದು. ಅಧ್ಯಕ್ಷರ ಇಮೇಲ್ ಐಡಿ : ***Kiran.mazumdar@biocon.com*** ಆಗಿರುತ್ತದೆ. ಒಂದು ವೇಳೆ ದೂರು ಸಮಗ್ರತಾ ಸಮಿತಿ ಸದಸ್ಯರು ಮತ್ತು/ಅಥವಾ ವ್ಯವಸ್ಥಾಪಕ ನಿರ್ದೇಶಕರು ಅಥವಾ ಅಧ್ಯಕ್ಷರನ್ನೊಳಗೊಂಡಿದ್ದಲ್ಲಿ, ಎಚ್ಚರಿಕೆ ಕಹಳೆದಾರರು ಒಂದು ಲಿಖಿತ ದೂರನ್ನು ಅಧ್ಯಕ್ಷರು, ಆಡಿಟ್ ಸಮಿತಿ, ಕೇರಾಫ್ ಮಾನವ ಸಂಪನ್ಮೂಲ ಮುಖ್ಯಸ್ಥರು/ಸಂಸ್ಥೆಗೆ ಕಳುಹಿಸಬಹುದು
- ಸೆಕ್ರೆಟರಿ/ರಿಸ್ಕ್ ಆ್ಯಂಡ್ ಕಂಪ್ಲೈಯನ್ಸ್ ಅಟ್ ಬಯೋಕಾನ್ ಲಿಮಿಟೆಡ್, 20ನೇ ಕಿ.ಮೀ, ಮತ್ತು ಹೊಸೂರು ರಸ್ತೆ, ಬೆಂಗಳೂರು-560 100 ಅಥವಾ ಕೇರಾಪ್ ಹೆಡ್-ಹ್ಯೂಮನ್ ರಿಸೋರ್ಸಸ್/ಕಂಪೆನಿ ಸೆಕ್ರೆಟರಿ/ರಿಸ್ಕ್ ಆ್ಯಂಡ್ ಕಂಪ್ಲೈಯನ್ಸ್/ಜನರಲ್ ಕೌನ್ಸೆಲ್ ಅಟ್ ಬಯೋಕಾನ್ ಬಯೋಲಾಜಿಕ್ಸ್

ಇಂಡಿಯಾ ಲಿಮಿಟೆಡ್*, ಬಯೋಕಾನ್ ಹೌಸ್, ಗ್ರೌಂಡ್ ಫ್ಲೋರ್, ಟವರ್ -3, ಸೆಮಿಕಾನ್ ಪಾರ್ಕ್, ಎಲೆಕ್ಟ್ರಾನಿಕ್ಸ್ ಸಿಟಿ, ಫೇಸ್-2, ಹೊಸೂರ್ ರೋಡ್, ಬೆಂಗಳೂರು-560100 ಅಥವಾ ಇಮೇಲ್ ***chairperson.auditcommittee@biocon.com***

### 4.1 ಒಬ್ಬ ಉದ್ಯೋಗಿಯ ಹಕ್ಕು ಮತ್ತು ಹೊಣೆಗಾರಿಕೆಗಳು :

- ತನಿಖಾ ಸಮಿತಿಯಿಂದ ಔಪಚಾರಿಕ ತನಿಖೆಯ ಪ್ರಾರಂಭದಲ್ಲಿ ಆರೋಪಗಳ ಬಗ್ಗೆ ಉದ್ಯೋಗಿಗಳಿಗೆ ತಿಳಿಸಬೇಕು ಮತ್ತು ತನಿಖೆಯ ಸಮಯದಲ್ಲಿ ಕೇಳಲು ಅವಕಾಶವಿರುತ್ತದೆ.
- ತನಿಖೆಯಲ್ಲಿ ಕಾನೂನು ಮತ್ತು ನ್ಯಾಯಸಮ್ಮಾತತೆಯ ನ್ಯಾಯಸಮ್ಮತ ಅಗತ್ಯತೆಗಳನ್ನು ನೀಡಿ ಉದ್ಯೋಗಿಯ ಗುರುತನ್ನು ಸಾಧ್ಯವಾದಷ್ಟು ಗೌಪ್ಯವಾಗಿ ನಿರ್ವಹಿಸಲಾಗುವುದು.
- ಬಲವಾದ ಕಾರಣಗಳಿಲ್ಲದಿದ್ದಲ್ಲಿ, ತನಿಖಾ ಸಮಿತಿಯು ಪ್ರಸ್ತುತ ಪಡಿಸಿದ ವರದಿಯಲ್ಲಿ ಒಳಗೊಂಡಿರುವ ಸಾಕ್ಷ್ಯದ ವಸ್ತು ಅಂಶಗಳಿಗೆ ಪ್ರತಿಕ್ರಿಯಿಸ ಉದ್ಯೋಗಿಗಳಿಗೆ ಅವಕಾಶ ನೀಡಲಾಗುತ್ತದೆ.
- ತನಿಖೆಯ ಫಲಿತಾಂಶದ ಬಗ್ಗೆ ತಿಳಿಸಲು ಉದ್ಯೋಗಿಗಳಿಗೆ ಹಕ್ಕು ಇರುತ್ತದೆ.
- ಉದ್ಯೋಗಿಗಳು ತನಿಖೆಯಲ್ಲಿ ಹಸ್ತಕ್ಷೇಪ ಮಾಡದಿರಲು ಮತ್ತು ಈ ನಿಟ್ಟಿನಲ್ಲಿ ತನಿಖಾ ಸಮಿತಿಯ ಸೂಚನೆಗಳಿಗೆ ಬದ್ಧವಾಗಿರಲು ಜವಾಬ್ದಾರಿಯನ್ನು ಹೊಂದಿರುತ್ತಾರೆ. ಸಾಕ್ಷ್ಯವನ್ನು ತಡೆಹಿಡಿಯುವುದು, ನಾಶಪಡಿಸುವುದು ಅಥವಾ ಹಾಳುಮಾಡುವುದನ್ನು ಮಾಡಬಾರದು ಮತ್ತು ಸಾಕ್ಷಿಗಳನ್ನು ಯಾವುದೇ ರೀತಿಯಲ್ಲಿ ಪ್ರಭಾವಿಸಬಾರದು, ತರಬೇತಿ ನೀಡಬಾರದು ಮತ್ತು ಭಯಪಡಿಸಬಾರದು.

### 4.2 ತನಿಖೆಯಲ್ಲಿ ಪಾಲ್ಗೊಳ್ಳುವವರ ನಡವಳಿಕೆ :

- ಸಂದರ್ಶಿಸಿದ, ಮಾಹಿತಿಯನ್ನು ಒದಗಿಸಲು ಅಥವಾ ತನಿಖೆಯಲ್ಲಿ ಭಾಗವಹಿಸಲು ಕೇಳಲಾದ ಎಲ್ಲಾ ಉದ್ಯೋಗಿಗಳು ("ಭಾಗವಹಿಸುವವರು") ತನಿಖಾ ಸಮಿತಿಯೊಂದಿಗೆ ಸಂಪೂರ್ಣವಾಗಿ ಸಹಕರಿಸುವ ಕರ್ತವ್ಯವನ್ನು ಹೊಂದಿರುತ್ತಾರೆ.
- ಭಾಗವಹಿಸಿದವರು ತನಿಖೆಗೆ ಸಂಬಂಧಿಸಿದಂತೆ ಯಾರೊಂದಿಗೂ ತನಿಖೆ ಅಥವಾ ಅವರ ಸಾಕ್ಷ್ಯವನ್ನು ಚರ್ಚಿಸುವುದರಿಂದ ಅಥವಾ ಬಹಿರಂಗಪಡಿಸುವುದರಿಂದ ದೂರವಿರಬೇಕು. ತನಿಖಾ ಸಮಿತಿಯು ಒಪ್ಪದ ಹೊರತು ಯಾವುದೇ ಸಂದರ್ಭದಲ್ಲೂ ಭಾಗವಹಿಸಿದವರು ಕೇಳಲಾದ/ಒದಗಿಸಲಾದ ಸಾಕ್ಷ್ಯದ ಸ್ವರೂಪ ಅಥವಾ ತನಿಖಾ ಸಮಿತಿಗೆ ನೀಡಲಾದ ಸಾಕ್ಷ್ಯಪ್ರಜೆಗಳೊಂದಿಗೆ ಚರ್ಚಿಸಬಾರದು.
- ಭಾಗವಹಿಸಿದವರ ಗೌಪ್ಯತೆಯ ವಿನಂತಿಗಳನ್ನು ಕಾನೂನು ಮತ್ತು ತನಿಖೆಯ ಕಾನೂನುಬದ್ಧ ಅಗತ್ಯಗಳೊಳಗೆ ಸಾಧ್ಯವಾದಷ್ಟು ಗೌರವಿಸಲಾಗುತ್ತದೆ.

## 5. ಎಚ್ಚರಿಕೆ ಕಹಳೆದಾರರ ರಕ್ಷಣೆ :

- ಈ ನೀತಿಯಡಿಯಲ್ಲಿ ಅನೈತಿಕ/ಅನುಸರಣೆ ಚಟುವಟಿಕೆಯನ್ನು ವರದಿ ಮಾಡಿದ ಕಾರಣಕ್ಕೆ ಎಚ್ಚರಿಕೆ ಕಹಳೆದಾರರಿಗೆ ಯಾವುದೇ ಅನ್ಯಾಯದ ಪರಿಗಣನೆಯನ್ನು ಮಾಡುವಂತಿಲ್ಲ. ಎಚ್ಚರಿಕೆ ಕಹಳೆದಾರರ ವಿರುದ್ಧ ಸಂಸ್ಥೆಯ ನೀತಿಯಂತೆ ಯಾವುದೇ ರೀತಿಯ ತಾರತಮ್ಯ, ಕಿರುಕುಳ, ಬಲಿಪಶುತ್ವ ಅಥವಾ ಯಾವುದೇ ಅನ್ಯಾಯದ ಕೆಲಸದ ಅಭ್ಯಾಸವನ್ನು ಅಳವಡಿಸುವಂತಿಲ್ಲ.
- ಯಾವುದೇ ಎಚ್ಚರಿಕೆ ಕಹಳೆದಾರರು ಯಾವುದೇ ರೀತಿಯ ಪ್ರತೀಕಾರ, ಬಲಿಪಶುತ್ವ ಅಥವಾ ಬೆದರಿಕೆಯ ರೀತಿಯಲ್ಲಿ ತಾರತಮ್ಯವನ್ನು ಅನುಭವಿಸುತ್ತಿದ್ದಾರೆ ಎಂಬುದಾಗಿ ಭಾವಿಸಿದಲ್ಲಿ, ದೂರನ್ನು ಹಿಂತೆಗೆದುಕೊಳ್ಳುವ ಒತ್ತಡ ಅಥವಾ ತನಿಖಾ ವರದಿಯಲ್ಲಿ, ಸಾಕ್ಷ್ಯ ನೀಡಿಕೆಯಲ್ಲಿ ಇಲ್ಲವೆ ತನಿಖಾ ನಡಾವಳಿಯಲ್ಲಿ ಭಾಗವಹಿಸಲು ಬೆದರಿಕೆ ಹಾಕಿದಲ್ಲಿ, ಅವರು ವಿಷಯವನ್ನು ಸಮಗ್ರತಾ ಸಮಿತಿಗೆ ವರದಿ ಮಾಡಬೇಕು.
- ಅನೈತಿಕ/ಅನುಸರಣಾ ಚಟುವಟಿಕೆಗಳಂತೆ, ಪ್ರತೀಕಾರ, ಬಲಿಪಶುತ್ವ ಅಥವಾ ತಾರತಮ್ಯದಂತಹ ಕ್ರಮಗಳನ್ನೂ ಸಹ ದುರ್ನಡತೆ ಎಂಬುದಾಗಿ ಪರಿಗಣಿಸಲಾಗುತ್ತದೆ ಮತ್ತು ಅಧಿಸೂಚನೆಯ ಮೇರೆಗೆ, ಪ್ರತೀಕಾರವನ್ನು ತಡೆಯಲು/ಸರಿಪಡಿಸಲು ಸಮಗ್ರತಾ ಸಮಿತಿಯು ತನಿಖೆ ಪೂರ್ಣಗೊಳ್ಳುವವರೆಗೆ ಅಂತಹ ಪ್ರತೀಕಾರ ಅಥವಾ ಬಲಿಪಶುತ್ವದ ಬಗ್ಗೆ ಅಪರಾಧಿಯನ್ನು ಆತನನ್ನು/ಆಕೆಯನ್ನು ವಿಚಾರಣೆಯನ್ನು ಬಾಕಿಯಿರಿಸಿ, ತಾತ್ಕಾಲಿಕವಾಗಿ ಉದ್ಯೋಗದಿಂದ ಅಮಾನತುಗೊಳಿಸುವುದೂ ಸೇರಿದಂತೆ ತಕ್ಷಣವೇ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತದೆ,
- ಬೆದರಿಕೆಯ ಸ್ವರೂಪದಲ್ಲಿ, ದೂರು ಹಿಂತೆಗೆದುಕೊಳ್ಳಲು ಒತ್ತಡ ಅಥವಾ ವರದಿ ಮಾಡುವ, ಸಾಕ್ಷ್ಯ ನೀಡುವ ಅಥವಾ ತನಿಖೆಯಲ್ಲಿ ಭಾಗವಹಿಸುವುದನ್ನು ತಡೆಯುವ ಬೆದರಿಕೆಗಳಂತಹ ಪ್ರತೀಕಾರ, ಬಲಿಪಶುತ್ವ ಅಥವಾ ತಾರತಮ್ಯವನ್ನು ಅನೈತಿಕ/ಅನುಸರಣಾ ಚಟುವಟಿಕೆಗಳ ಆಪಾದಿತ ಪ್ರಕರಣವೆಂದು

ಗಂಭೀರವಾಗಿ ಪರಿಗಣಿಸಲಾಗುವುದು ಮತ್ತು ಮೂಲ ದೂರು ಸಾಬೀತಾಗದಿದ್ದರೂ ಪ್ರತೀಕಾರ/ಬಲಿಪಶುತ್ವ/ಬೆದರಿಕೆಯಂತಹ ಕೃತ್ಯದ ಅಪರಾಧಿಯ ಉದ್ಯೋಗವನ್ನು ಸಮಾಪ್ತಿಗೊಳಿಸಬಹುದು.

- ಎಚ್ಚರಿಕೆ ಕಹಳೆದಾರರು, ಅನೈತಿಕ/ಅನುಸರಣಾ ಚಟುವಟಿಕೆಗಳನ್ನು ವರದಿ ಮಾಡಿದ ಪರಿಣಾಮಗಳನ್ನು ಅನುಭವಿಸಿದಲ್ಲಿ, ಸಂಸ್ಥೆಯು ತೊಂದರೆಗಳನ್ನು ಕಡಿಮೆಗೊಳಿಸಲು ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಹಾಗಾಗಿ ಎಚ್ಚರಿಕೆ ಕಹಳೆದಾರರು, ಕ್ರಿಮಿನಲ್ ಅಥವಾ ಶಿಸ್ತು ಪ್ರಕ್ರಿಯೆಯಲಿ ಸಾಕ್ಷ್ಯವನ್ನು ನೀಡಬೇಕಾದಲ್ಲಿ, ಸಂಸ್ಥೆಯು ಎಚ್ಚರಿಕೆ ಕಹಳೆದಾರರಿಗೆ ಕಾರ್ಯವಿಧಾನ ಇತ್ಯಾದಿಗಳ ಬಗ್ಗೆ ಸಲಹೆಯನ್ನು ಪಡೆಯುವ ವ್ಯವಸ್ಥೆ ಮಾಡುತ್ತದೆ.
- ಎಚ್ಚರಿಕೆ ಕಹಳೆದಾರರ ಗುರುತನ್ನು ಅತ್ಯುನ್ನತ ಮಟ್ಟದ ಗೌಪ್ಯತೆಯ ಅಡಿಯಲ್ಲಿ ಗೌಪ್ಯವಾಗಿ ಇರಿಸಲಾಗುತ್ತದೆ.
- ಸದರಿ ತನಿಖೆಯಲ್ಲಿ ಸಹಾಯ ಮಾಡುವ ಅಥವಾ ಸಾಕ್ಷ್ಯವನ್ನು ಒದಗಿಸಲು ಪಾಲ್ಗೊಳ್ಳುವವರನ್ನು, ಎಚ್ಚರಿಕೆ ಕಹಳೆದಾರರಂತೆಯೇ ರಕ್ಷಿಸಲಾಗುವುದು ಮತ್ತು ತನಿಖೆಯಲ್ಲಿ ಭಾಗವಹಿಸಿರುವ ಬಗ್ಗೆ ಪ್ರತೀಕಾರದಿಂದಲೂ ಸಹ ಅದೇ ಮಟ್ಟದ ರಕ್ಷಣೆಗೆ ಅರ್ಹರಾಗುತ್ತಾರೆ.
- ಯಾವುದೇ ಸಮಯದಲ್ಲಿ ತನಿಖೆಯಿಂದ ಎಚ್ಚರಿಕೆ ಕಹಳೆದಾರರು, ವರದಿ ಮಾಡಲಾದ ಅನೈತಿಕ/ಅನನುಸರಣಾ ಚಟುವಟಿಕೆಯಲ್ಲಿ ಹೇಗಾದರೂ ತೊಡಗಿದ್ದಾನೆಂಬುದಾಗಿ ತನಿಖೆಯಿಂದ ಬಹಿರಂಗಗೊಂಡಲ್ಲಿ, ಅನೈತಿಕ/ಅನನುಸರಣಾ ಚಟುವಟಿಕೆಯ ವರದಿ ಮಾಡಿದ ಅಪರಾಧಿಯ ವಿರುದ್ಧ ಅದೇ ಮಟ್ಟದಲ್ಲಿ ಮುಂದುವರೆಯುವುದರಿಂದ ಎಚ್ಚರಿಕೆ ಕಹಳೆದಾರ ವಿನಾಯಿತಿಯನ್ನು ಹೊಂದುವುದಿಲ್ಲ.

### 5.1 ರಹಸ್ಯ/ಗೌಪ್ಯತೆ :

ಎಚ್ಚರಿಕೆ ಕಹಳೆದಾರ, ಪ್ರಜೆ, ಸಮಗ್ರತಾ ಸಮಿತಿ ಸದಸ್ಯರು, ಭಾಗವಹಿಸಿದವರು ಮತ್ತು ಪ್ರಕ್ರಿಯೆಯಲ್ಲಿ ಒಳಗೊಂಡ ಪ್ರತಿಯೊಬ್ಬರೂ :

ಎ) ವಿಷಯದ ಬಗ್ಗೆ ಸಂಪೂರ್ಣ ಗೌಪ್ಯತೆ/ರಹಸ್ಯವನ್ನು ಕಾಪಾಡಬೇಕು.

ಬಿ) ವಿಷಯವನ್ನು ಯಾವುದೇ ಅನೌಪಚಾರಿಕ/ಸಾಮಾಜಿಕ ಸಭೆ/ಸಭೆಗಳಲ್ಲಿ ಚರ್ಚಿಸಬಾರದು.

ಸಿ) ಪ್ರಕ್ರಿಯೆ ಮತ್ತು ತನಿಖೆಗಳನ್ನು ಪೂರ್ಣಗೊಳಿಸುವ ಉದ್ದೇಶಕ್ಕಾಗಿ ಅಗತ್ಯವಿರುವ ವ್ಯಕ್ತಿಗಳೊಂದಿಗೆ ಮಾತ್ರ ಚರ್ಚಿಸುವುದು.

ಡಿ) ಯಾವುದೇ ಸಮಯದಲ್ಲಿ, ಗಮನಿಸದೇ ಕಾಗದ ಪತ್ರಗಳನ್ನು ಇಡಬಾರದು.

ಇ) ವಿದ್ಯುನ್ಮಾನ ಮೇಲ್/ಫೈಲ್‌ಗಳನ್ನು ಪಾಸ್‌ವರ್ಡ್ ಅಡಿಯಲ್ಲಿರಿಸುವುದು.

ಸೂಚನೆ : ಯಾರಾದರೂ ಮೇಲಿನವುಗಳನ್ನು ಅನುಸರಿಸದಿರುವುದು ಕಂಡುಬಂದಲ್ಲಿ, ಸಂಸ್ಥೆಯು ಸೂಕ್ತವೆಂಬುದಾಗಿ ಪರಿಗಣಿಸುವ ಶಿಸ್ತು ಕ್ರಮಕ್ಕೆ ಆತ/ಆಕೆ ಹೊಣೆಗಾರರಾಗುತ್ತಾರೆ.

## 6. ವರದಿ ಮಾಡುವುದು ಮತ್ತು ಉಳಿಸಿಕೊಳ್ಳುವುದು :

- ಸಮಗ್ರತಾ ಸಮಿತಿಯು ಅವರಿಗೆ ಬಂದಿರುವ ಎಲ್ಲಾ ದೂರುಗಳ ಬಗ್ಗೆ ನಿಯತಕಾಲಿಕವಾಗಿ (ತ್ರೈಮಾಸಿಕ) ವರದಿಯನ್ನು ತನಿಖೆಯ ಫಲಿತಾಂಶ ಇತ್ಯಾದಿಗಳೊಂದಿಗೆ ಆಡಿಟ್ ಸಮಿತಿಗೆ ಸಲ್ಲಿಸಬೇಕು.
- ಸಂಬಂಧಿತ ದಾಖಲೆಗಳನ್ನು ಸಂಸ್ಥೆಯ 'ದಾಖಲೆ ಧಾರಣಾ ನೀತಿ'ಯನುಸಾರ ಉಳಿಸಿಕೊಳ್ಳುವುದು. ಒಂದು ವೇಳೆ ಯಾವುದೇ ದೂರು ಬಾರದಿದ್ದಲ್ಲಿ, ಅದರ ನವೀಕರಣವನ್ನೂ ಸಹ ಆಡಿಟ್ ಸಮಿತಿಗೆ ಒದಗಿಸಬೇಕು.

## 7. ನೀತಿಯ ದುರುಪಯೋಗವನ್ನು ತಡೆಗಟ್ಟುವಿಕೆ :

- ಇಲ್ಲಿ ಸೂಚಿಸಿರುವಂತೆ ನಿಜವಾದ ಎಚ್ಚರಿಕೆ ಕಹಳೆದಾರರಿಗೆ ಯಾವುದೇ ರೀತಿಯ ಅನ್ಯಾಯದ ಪರಿಗಣೆಯಿಂದ ಸಂಪೂರ್ಣ ರಕ್ಷಣೆಯನ್ನು ನೀಡಲಾಗುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು, ಈ ರಕ್ಷಣೆಯ ಯಾವುದೇ ದುರುಪಯೋಗ ಶಿಸ್ತು ಕ್ರಮಕ್ಕೆ ಬದ್ಧವಾಗುತ್ತದೆ.
- ಈ ನೀತಿಯ ಅಡಿಯಲ್ಲಿ ರಕ್ಷಣೆ ಎಂದರೆ, ಅದು ಸುಳ್ಳು ಅಥವಾ ದುರುದ್ದೇಶಪೂರಿತ ಉದ್ದೇಶದಿಂದ ವರದಿ ಮಾಡಲಾದ ಎಚ್ಚರಿಕೆ ಕಹಳೆದಾರ ಮಾಡಿದ ಸುಳ್ಳು ಅಥವಾ ನಕಲಿ ಆರೋಪಗಳಿಂದ ಉಂಟಾಗುವ ಶಿಸ್ತು ಕ್ರಮದಿಂದ ರಕ್ಷಣೆ ಎಂದರ್ಥವಲ್ಲ.
- ಎಚ್ಚರಿಕೆ ಕಹಳೆದಾರ ಯಾವುದೇ ದೂರನ್ನು ಮಾಡಿದ ತರುವಾಯ ಅದು ದುರುದ್ದೇಶಪೂರಿತ, ಕ್ಷುಲ್ಲಕ ಅಥವಾ ದುರ್ಭಾವನೆಯಿಂದ ಮಾಡಲಾಗಿದೆ ಎಂಬುದು ಕಂಡು ಬಂದಲ್ಲಿ ಈ ನೀತಿ ಸಂಹಿತೆಯಡಿಯಲ್ಲಿ ಕಾನೂನು ಕ್ರಮ ಜರುಗಿಸಲು ಹೊಣೆಗಾರನಾಗುತ್ತಾರೆ.

- ಈ ನೀತಿಯು ಸಂಪೂರ್ಣವಾಗಿ ವೈಯಕ್ತಿಕ ಸ್ವರೂಪದ ಮತ್ತು ಸಂಸ್ಥೆಯ ಹೊರಗೆ ಉದ್ಭವಿಸುವ ಮತ್ತು ಸಂಸ್ಥೆಯ ಕಾರ್ಯಾಚರಣೆಗಳ ಮೇಲೆ ಯಾವುದೇ ಪರಿಣಾಮ ಬೀರದ ದೂರುಗಳನ್ನು ಒಳಗೊಳ್ಳಲು ಉದ್ದೇಶಿತವಾಗಿರುವುದಿಲ್ಲ.
- ಸದ್ಭಾವನೆಯಿಂದ ಮಾಡಿದ ದೂರು (ಸಮಗ್ರತಾ ಸಮಿತಿಯ ಸಂಪೂರ್ಣ ವಿವೇಚನೆಯಂತೆ) ತರುವಾಯ ಸುಳ್ಳು ಎಂಬುದಾಗಿ ಕಂಡುಬಂದಲ್ಲಿ, ಎಚ್ಚರಿಕೆ ಕಹಳೆದಾರರ ವಿರುದ್ಧ ಯಾವುದೇ ಕ್ರಮವನ್ನು ಪ್ರಾರಂಭಿಸಲಾಗುವುದಿಲ್ಲ.
- ಎಚ್ಚರಿಕೆ ಕಹಳೆದಾರರು ಮಾಡಿದ ಅನೈತಿಕ/ಅನುಸರಣಾ ಚಟುವಟಿಕೆಗಳ ದೂರುಗಳು ನೈಜವಾಗಿರಬೇಕು ಮತ್ತು ಸಾಕಷ್ಟು ಬೆಂಬಲಿತ ಪುರಾವೆಗಳನ್ನು ಹೊಂದಿರಬೇಕು. ಎಚ್ಚರಿಕೆ ಕಹಳೆದಾರ ಒದಗಿಸಿದ ಮಾಹಿತಿಯು ಅವರ ಪ್ರತ್ಯಕ್ಷ ಅನುಭವದ ಆಧಾರದ ಮೇಲೆ ಇರಬೇಕು. ಅದು ಗಾಳಿಸುದ್ದಿಯಂತಹ ಬೇರೆಯವರ ಮೂಲಕ ತಿಳಿದ ಅಥವಾ ಯಾವುದೇ ಅನೌಪಚಾರಿಕ ಸಂವಹನವನ್ನು ಆಧರಿಸರಬಾರದು.
- ಎಚ್ಚರಿಕೆ ಕಹಳೆದಾರ ತನ್ನ ಗುರುತನ್ನು ಸಮಗ್ರತಾ ಸಮಿತಿಗೆ ಬಹಿರಂಗಗೊಳಿಸಲು ಆಯ್ಕೆ ಮಾಡಿದಲ್ಲಿ, ತನಿಖೆಯ ಉದ್ದೇಶಕ್ಕಾಗಿ ಪ್ರಕರಣವನ್ನು ಪರಿಗಣಿಸುವ ಮೊದಲು ಎಚ್ಚರಿಕೆ ಕಹಳೆದಾರರ ಗುರುತಿನ ದೃಢೀಕರಣವನ್ನು ಸ್ಥಾಪಿಸಬೇಕು.
- ಅನಾಮಧೇಯ ಬಹಿರಂಗಪಡಿಸುವಿಕೆಯ ಸಂದರ್ಭದಲ್ಲಿ ಸಮಗ್ರತಾ ಸಮಿತಿಯು ತನಿಖೆಯೊಂದಿಗೆ ಮುಂದುವರಿಯುವ ಮೊದಲು ಬಹಿರಂಗಗೊಳಿಸುವಿಕೆಯ ಸಂಭವನೀಯ ಉದ್ದೇಶ ಮತ್ತು ನೈಜತೆಯನ್ನು ಪರಿಶೀಲಿಸುತ್ತದೆ. ದೂರನ್ನು ದುರುದ್ದೇಶದಿಂದ ಅಥವಾ ಕ್ಷುಲ್ಲಕ ಸ್ವರೂಪದ್ದಾಗಿದೆ ಎಂಬುದಾಗಿ ಅವರು ಅನುಮಾನಿಸಿದರೆ, ಉಚಿತವಾಗಿ ದಾಖಲಿಸಿದ ಕಾರಣಗಳಂತೆ ಪ್ರಕರಣವನ್ನು ಕೈಬಿಡಲು ಅವರು ನಿರ್ಧರಿಸಬಹುದು.

### ೮. ತಿದ್ದುಪಡಿ :

ಸಮಗ್ರತಾ ಸಮಿತಿಯು ಈ ನೀತಿಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ (ನಿರ್ಣಾಯಕವಲ್ಲದ ಬದಲಾವಣೆಗಳು) ತಿದ್ದುಪಡಿ ಮಾಡುವ ಅಥವಾ ಮಾರ್ಪಡಿಸುವ ಹಕ್ಕನ್ನು ಹೊಂದಿರುತ್ತದೆ ಮತ್ತು ಈ ನೀತಿಯನ್ನು ಅನುಮೋದನೆಗಾಗಿ ಆಡಿಟ್ ಸಮಿತಿಗೆ ಪೂರ್ಣವಾಗಿ ಅಥವಾ ಭಾಗಶಃ (ನಿರ್ಣಾಯಕ ಬದಲಾವಣೆಗಳು) ತಿದ್ದುಪಡಿ ಅಥವಾ ಮಾರ್ಪಾಡನ್ನು ಮಾಡಲು ಶಿಫಾರಸು ಮಾಡುವ ಹಕ್ಕನ್ನು ಹೊಂದಿರುತ್ತದೆ.

### ೯. ಉಲ್ಲೇಖನಗಳು :

- ನೀತಿ ಸಂಹಿತೆ - ಎಸ್‌ಎಪಿ ಇಎಸ್‌ಎಸ್ ನಲ್ಲಿ ಲಭ್ಯವಿದೆ.
- ಸರಬರಾಜುದಾರರ ನೀತಿ ಸಂಹಿತೆ - ಸಂಸ್ಥೆಯ ಜಾಲತಾಣದಲ್ಲಿ ಲಭ್ಯವಿದೆ.

Interpretation : ಎಚ್ಚರಿಕೆ ಕಹಳೆ ಹಾಗೂ ಸಮಗ್ರ ನೀತಿಯನ್ನು Interpret ಮಾಡುವುದಕ್ಕಾಗಿ ಆಂಗ್ಲ ಭಾಷೆಯಲ್ಲಿ ಬರೆದಿರುವ ನೀತಿಯನ್ನು ಅನುಸರಿಸತಕ್ಕದ್ದು